**Newspaper Cutting: PRAJAVANI, Bangalore - February 01, 2013**

# ಪೆಸ್ಟ್ ಕಂಟ್ರೋಲ್ ಕಂಪೆನಿ ಸಂಶೋಧನೆಗೆ ಮೆಚ್ಚುಗೆ

ಯಲಹಂಕ: ರಾಜಾನುಕುಂಟೆ ಸಮೀಪದ ಶ್ರೀರಾಮನಹಳ್ಳಿಯಲ್ಲಿರುವ ಪೆಸ್ಟ್ ಕಂಟ್ರೋಲ್(ಇಂಡಿಯಾ) ಪ್ರೈವೇಟ್ ಲಿಮಿಟೆಡ್(ಪಿಸಿಐ) ಕಂಪನಿಯ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗವಾದ ಬಯೋ- ಕಂಟ್ರೋಲ್ ರೀಸರ್ಚ್ ಲ್ಯಾಬೊರೇಟರಿಗೆ ಅಂತರರಾಷ್ಟ್ರೀಯ ಆಹಾರ ಮತ್ತು ಕೃಷಿ ಅಭಿವೃದ್ಧಿ ಮಂಡಳಿಯ ಸದಸ್ಯ ಮಾರ್ಟಿ ಮ್ಯಾಕ್ವಿ ಭೇಟಿ ನೀಡಿದ್ದರು.

ಈ ಸಂದರ್ಭದಲ್ಲಿ ಕಂಪನಿಯ ವಿವಿಧ ಘಟಕಗಳನ್ನು ವೀಕ್ಷಿಸಿ ಮಾಹಿತಿ ಪಡೆದುಕೊಂಡ ಅವರು, ತರಕಾರಿ ಬೆಳೆಗಳಿಗೆ ತಗಲುವ ಕೀಟ ಮತ್ತು ರೋಗ ಹತೋಟಿ ಮಾಡಲು ರೈತರಿಗೆ ಉಪಯೋಗವಾಗುವಂತಹ ಸಾಕಷ್ಟು ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವ ಮೂಲಕ ಮನುಷ್ಯನ ಆರೋಗ್ಯಕ್ಕೆ ಹಾನಿಕಾರಕವಲ್ಲದ ಹಾಗೂ ಮುಂದಿನ ಪೀಳಿಗೆಗೆ ಭೂಮಿಯನ್ನು ಫಲವತ್ತತೆಯಿಂದ ಇಟ್ಟುಕೊಳ್ಳಲು ಅಗತ್ಯವಿರುವ ಸಂಶೋಧನೆಗಳನ್ನು ಈ ಕಂಪನಿಯು ನಡೆಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ತರಕಾರಿ ಬೆಳೆಗಳಿಗೆ ಬೀಳುವ ಹುಳುಗಳನ್ನು ನಿಯಂತ್ರಿಸಲು ಅಭಿವೃದ್ಧಿಪಡಿಸಿರುವ ಚಿಟ್ಟೆಯನ್ನು ಹಿಡಿಯಲು ಬಳಸುವ ಲಿಂಗಾಕರ್ಷಕ ಬಲೆಗಳು ಮತ್ತು ಲಿಂಗಾಕರ್ಷಕ ವಸ್ತುಗಳನ್ನು ವೀಕ್ಷಿಸಿದರು.



ಯಲಹಂಕ ಸಮೀಪದ ಶ್ರೀರಾಮನಹಳ್ಳಿಯಲ್ಲಿ ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆದಿರುವ ಎಲೆಕೋಸು ಬೆಳೆಯನ್ನು ಅಂತರರಾಷ್ಟ್ರೀಯ ಆಹಾರ ಮತ್ತು ಕೃಷಿ ಅಭಿವೃದ್ಧಿ ಮಂಡಳಿಯ ಸದಸ್ಯ ಮಾರ್ಟಿ ಮ್ಯಾಕ್ವಿ ವೀಕ್ಷಿಸಿದರು. ಪೆಸ್ಟ್ ಕಂಟ್ರೋಲ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ (ಪಿಸಿಐ) ಕಂಪನಿಯ ವ್ಯವಸ್ಥಾಪಕರಾದ ಡಾ.ಭಾನು, ಡಾ.ಮಾಳವಿಕ ಇತರರು ಚಿತ್ರದಲ್ಲಿದ್ದಾರೆ

ಬೆಳೆಗಳಿಗೆ ತಗಲುವ ಕೀಟನಾಶಕಗಳನ್ನು ನಿಯಂತ್ರಿಸಲು ಬಾಂಗ್ಲಾದೇಶ, ನೇಪಾಳ, ಕಜಕಿಸ್ತಾನ ಇಂಡೋನೇಷಿಯಾ, ದಕ್ಷಿಣ ಅಮೆರಿಕಾದ ಈಕ್ವೆಡಾರ್‌ನಲ್ಲಿ ಅನುಸರಿಸುತ್ತಿರುವ ಪದ್ಧತಿಯ ಜೊತೆಗೆ ಇಲ್ಲಿನ ವ್ಯವಸ್ಥೆಯನ್ನೂ ಅಳವಡಿಸಿಕೊಳ್ಳುವ ಸಂಬಂಧ ಅಮೆರಿಕಾ ಅಧ್ಯಕ್ಷ ಬರಾಕ್ ಒಬಾಮ ಅವರೊಂದಿಗೆ ಚರ್ಚೆ ನಡೆಸಿ, ಅನುಷ್ಠಾನಕ್ಕೆ ತರಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

ಕಂಪನಿಯ ಉಪಾಧ್ಯಕ್ಷ ಡಾ.ಕೆ.ಪಿ. ಜಯಂತ್ ಮಾತನಾಡಿ, ನಮ್ಮ ಕಂಪನಿಯಲ್ಲಿ ಸಮಗ್ರಪೀಡೆ ನಿರ್ವಹಣೆಗಾಗಿ ಈಗಾಗಲೆ ಅಭಿವೃದ್ಧಿಪಡಿಸಿರುವ ಉತ್ಪನ್ನಗಳ ಜೊತೆಗೆ ಮನೆಗಳಲ್ಲಿ ಸಂಗ್ರಹಿಸಿಡುವ ಅವರೆ, ತೊಗರಿ ಮತ್ತಿತರ ಕಾಳುಗಳಿಗೆ ಬೀಳುವ ಹುಳುಗಳನ್ನು ನಿಯಂತ್ರಣ ಮಾಡುವ ನಿಟ್ಟಿನಲ್ಲಿ ಸಂಶೋಧನೆಗಳನ್ನು ನಡೆಸಲಾಗುತ್ತಿದೆ. ಶೀಘ್ರದಲ್ಲೆ ರೈತರಿಗೆ ಇದರ ಉಪಯೋಗ ದೊರೆಯಲಿದೆ ಎಂದರು.